**<u>ದಿನಾಂಕಃ 10.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು:- ಪ್ರತಿವಾದಿ ಪರ ಶ್ರೀ ಸಿ.ಎಂ.ಕೆ. ವಕೀಲರಿಂದಃ</u>**

1) ದಾವಾ ಸ್ವತ್ತಿನ ಪೂರ್ವಕ್ಕೆ ಮಮತಾ ರವರ ಜಮೀನು ಇದೆ ಎಂದರೆ ಸರಿ. ಸದರಿ ಜಮೀನನ್ನು ಮಮತಾ ರವರು ಕಾಡಮ್ಮ ಮತ್ತು ಆಕೆಯ ಮಗ ಬೋರಯ್ಯ ರವರಿಂದ ಕ್ರಯಕ್ಕೆ ಪಡೆದಿದ್ದರು ಎಂದರೆ ಸರಿ. ಮಮತಾ ರವರ ಕ್ರಯ ಪತ್ರದಲ್ಲಿ ಆಕೆಯ ಸ್ವತ್ತಿನ ಪಶ್ಚಿಮ ದಿಕ್ಕಿಗೆ ಪ್ರತಿವಾದಿಗಳ ಸ್ವತ್ತು ಇದೆ ಎಂದರೆ ಸಾಕ್ಷಿಯು ತಾನು ಕ್ರಯ ಪತ್ರ ನೋಡಿಲ್ಲ ಎಂದು ನುಡಿಯುತ್ತಾರೆ.

2) ದಾವಾ ಸ್ವತ್ತಿನಲ್ಲಿ 8 ಮಾವಿನ ಮರಗಳು ಇವೆ.ಮಮತಾ ರವರ ಸ್ವತ್ತಿನಲ್ಲಿ ನೀರಿನ ವ್ಯವಸ್ಥೆ ಇರುವುದಿಲ್ಲ. ಆಕೆಯ ಜಮೀನಿನಲ್ಲಿ ಮಳೆಯ ಆಶ್ರಿತ ಮೇರೆಗೆ ಹುರುಳಿ ಮತ್ತು ರಾಗಿ ಬೆಳೆಯುತ್ತಾರೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ನೆಟ್ಟಿದ್ದ ಮಾವಿನ ಗಿಡಗಳನ್ನು ನೀವು ಕಿತ್ತು ಹಾಕಿದ್ದಾಗಿ ಪ್ರತಿವಾದಿಗಳು ನಿಮ್ಮ ವಿರುದ್ಧ 2020 ರಲ್ಲಿ ಎಂ.ಕೆ.ದೊಡ್ಡಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು ಎಂದರೆ ಸಾಕ್ಷಿಯು ದೂರು ನೀಡಿರಬಹುದು ಆ ಬಗ್ಗೆ ತನಗೆ ಗೊತ್ತಿಲ್ಲ ಮತ್ತು ತಾನು ಯಾವುದೇ ಗಿಡ ಕಿತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ಮೂಲತಃ ಗೋಮಾಳದ ಜಾಗ ಎಂದರೆ ಸರಿ. ದಾವಾ ಸ್ವತ್ತಿನ ಅಕ್ಕ ಪಕ್ಕದಲ್ಲಿ ನಿಮಗೆ ಸೇರಿದ ಬೇರೆ ಯಾವುದೇ ಜಮೀನು ಇಲ್ಲ ಎಂದರೆ ಸಾಕ್ಷಿಯು ರಸ್ತೆ ದಾಟಿದ ನಂತರ ತಮಗೆ ಸೇರಿದ ಇನ್ನೊಂದು ಸ್ವತ್ತು ಇದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ದಕ್ಷಿಣ ದಿಕ್ಕಿಗೆ ರಸ್ತೆ ಮತ್ತು ಕಾಲೋನಿ ಗ್ರಾಮ ಠಾಣಾ ಇರುತ್ತದೆ. ರಸ್ತೆಗೆ ಹೊಂದಿಕೊಂಡಿರುವ ಕಾಲೋನಿ ಜಾಗ ಸರ್ಕಾರಕ್ಕೆ ಸೇರಿರುತ್ತದೆ. ದಾವಾ ಸ್ವತ್ತಿನಿಂದ 15 ಮೀಟರ್ ದೂರದಲ್ಲಿ ನನಗೆ ಸೇರಿದ ಇನ್ನೊಂದು ಸ್ವತ್ತು ಸರ್ವೆ ನಂ.17/8 ರಲ್ಲಿ ಇದೆ. ಸದರಿ ಸ್ವತ್ತು 1 ಎಕರೆ 16 ಗುಂಟೆ ವಿಸ್ತೀರ್ಣ ಹೊಂದಿರುತ್ತದೆ. ದಾವಾ ಸ್ವತ್ತಿನ ದಕ್ಷಿಣ ದಿಕ್ಕಿಗೆ ಗ್ರಾಮ ಠಾಣಾ ಜಾಗ ಆದ ನಂತರ ನನಗೆ ಸೇರಿದಂತೆ ಸರ್ವೆ ನಂ.17/8 ರಲ್ಲಿ ಯಾವುದೇ ಸ್ವತ್ತು ಇಲ್ಲ ಎಂದರೆ ಸರಿಯಲ್ಲ. ಗೋಮಾಳದ ಸ್ವತ್ತಿನ ಪಕ್ಕದಲ್ಲಿ ಇರುವ ಜಮೀನಿನ ಜನರು ತಮ್ಮ ಜಮೀನುಗಳ ನೇರ ದಿಕ್ಕಿಗೆ ಇರುವ ಗೋಮಾಳದ ಸ್ವತ್ತುಗಳನ್ನು ಒತ್ತುವರಿ ಮಾಡಿಕೊಂಡು ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿ. ದಾವಾ ಸ್ವತ್ತಿನ ಅಕ್ಕಪಕ್ಕದಲ್ಲಿ ನನಗೆ ಸೇರಿದ ಬೇರೆ ಯಾವುದೇ ಸ್ವತ್ತು ಇರದೇ ಇರುವ ಕಾರಣ ನಾನು ದಾವಾ ಸ್ವತ್ತನ್ನು ಉಳುಮೆ ಮಾಡುತ್ತಿಲ್ಲ ಎಂದರೆ ಸರಿಯಲ್ಲ.

3) ದಾವೆಯನ್ನು ಹೂಡುವ ಕಾಲಕ್ಕೆ ದಾವಾ ಸ್ವತ್ತಿನಲ್ಲಿ 6-8 ಮಾವಿನ ಮರಗಳು ಇರುತ್ತವೆ ಎಂದು ತಿಳಿಸಿದ್ದೇನೆ. ದಾವಾ ಸ್ವತ್ತಿನಲ್ಲಿ ನಾನು ಸ್ವಾಧೀನದಲ್ಲಿ ಇರದ ಕಾರಣ ನನಗೆ ದಾವಾ ಸ್ವತ್ತಿನಲ್ಲಿ ನಿಖರವಾಗಿ ಎಷ್ಟು ಮಾವಿನ ಮರಗಳು ಇವೆ ಎಂದು ಗೊತ್ತಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ತಮ್ಮ ಪ್ರತಿವಾದ ಪತ್ರದಲ್ಲಿ ದಾವಾ ಸ್ವತ್ತಿನಲ್ಲಿ 8 ಮಾವಿನ ಮರಗಳು ಇವೆ ಎಂದು ನಿಲುವು ತೆಗೆದುಕೊಂಡಿರುವುದನ್ನು ನೋಡಿದ ನಂತರ ನಾನು ಅಲ್ಲಿ 8 ಮರಗಳು ಇರುವುದಾಗಿ ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

4) ದಾವಾ ಸ್ವತ್ತು ಮೂಲತಃ ಗೋಮಾಳ ಆಗಿದ್ದು ಕಳೆದ 50 ವರ್ಷಗಳಿಂದಲೂ ಮುದ್ದೇಗೌಡರು ಮತ್ತು ಆತನ ಕುಟುಂಬದವರು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಉತ್ತರಕ್ಕೆ ಪ್ರತಿವಾದಿಗಳಿಗೆ ಸೇರಿದ ಬೇರೆ ಜಾಗ ಇರುವ ಕಾರಣ ದಾವಾ ಸ್ವತ್ತನ್ನು ಪ್ರತಿವಾದಿಗಳೇ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಸ್ವಾಧೀನದಲ್ಲಿ ಇರುವ ದಾವಾ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ನಾನು ದಾವಾ ಸ್ವತ್ತಿನಲ್ಲಿ ಸ್ವಾಧೀನ ಇದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5) ದಾವಾ ಸ್ವತ್ತನ್ನು ತಮಗೆ ಮಂಜೂರು ಮಾಡುವಂತೆ ಪ್ರತಿವಾದಿಗಳು ಕಂದಾಯ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಅವರು ಅರ್ಜಿ ಸಲ್ಲಿಸಿಲ್ಲ ಎಂದು ನುಡಿಯುತ್ತಾರೆ. ಸದರಿ ಆದೇಶದಲ್ಲಿ ಸ್ಥಳ ಪರಿಶೀಲನೆ ಮಾಡಿ ಜಮೀನು ಮಂಜೂರು ಮಾಡುವಂತೆ ಆದೇಶ ಆಗಿತ್ತು ಎಂದರೆ ಸರಿಯಲ್ಲ. ನನಗೂ ಮತ್ತು ದಾವಾ ಸ್ವತ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಕರಣ ದಾಖಲಿಸಿ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**

**ನ್ಯಾಯಾಲಯ, ಚನ್ನಪಟ್ಟಣ.**